ನಿಶ್ಶಬ್ದರಾಗಿ ಮೈಯೆಲ್ಲಾ ಕಿವಿಯಾಗಿಸಿ ಕುಳಿತರು. ಸ್ವಾಮೀಜಿ, 'ಮಿಸೆಸ್. ಓಲಿ ಬುಲ್ ಒಬ್ಬ ಸಂತಳು, ನಿಜವಾಗಿ ಸಂತಳು. ಆಕೆಯನ್ನು ನೋಡುವುದೇ ಒಂದು ತೀರ್ಥಯಾತ್ರೆ' ಎಂದರು!

ಸಾರಾ ಬುಲ್‌ಳನ್ನು ಕುರಿತು ಎಷ್ಟೋ ಬಾರಿ ಸ್ವಾಮೀಜಿ ಹೀಗೆ ಹೇಳುತ್ತಿದ್ದರು: "ಅಮೆರಿಕದಲ್ಲಿ ಮಿಸೆಸ್. ಓಲಿ ಬುಲ್ ನನ್ನ ಅತ್ಯಂತ ಆತ್ಮೀಯ ಸ್ನೇಹಿತೆ; ನನ್ನ ಭಾವನೆಗಳನ್ನೆಲ್ಲಾ ಅರ್ಥಮಾಡಿಕೊಳ್ಳುವವಳು ಮತ್ತು ಸದಾ ನನಗೆ ಹಿತವಾದದ್ದನ್ನು, ಒಳ್ಳೆಯದನ್ನೇ ಬಯಸುವವಳು."

## ಜೊಸೆಫಿನ್ ಮ್ಯಾಕ್‌ಲೌಡ್

೧೮೯೫ ರ ಜನವರಿ ೨೯ ನೇ ತಾರೀಖು ನ್ಯೂಯಾರ್ಕ್‌ನಲ್ಲಿ ಸ್ವಾಮೀಜಿ ತಮ್ಮ ತರಗತಿಗಳ ಹೊಸ ತಂಡವನ್ನು ಆರಂಭಿಸಿದರು. ಅದನ್ನು ಆಲಿಸಿದ ಒಬ್ಬಾಕೆ ಹೀಗೆ ಹೇಳುತ್ತಾಳೆ: "ಸ್ವಾಮಿ ವಿವೇಕಾನಂದರು ಒಂದು ಮೂಲೆಯಲ್ಲಿ ನಿಂತು ಮಾತನಾಡುತ್ತಿದ್ದರು. ಅವರೇನು ಹೇಳಿದರೋ ಆ ಶಬ್ದಗಳು ನನಗೆ ನೆನಪಿಲ್ಲ. ಆದರೆ ಅದು ಸತ್ಯವೆಂದು ನನಗೆ ತೋರಿತು. ಅವರು ಹೇಳಿದ ಎರಡನೇ ವಾಕ್ಯವೂ ಸತ್ಯವಾಗಿತ್ತು, ಮೂರನೇ ವಾಕ್ಯವೂ ಸತ್ಯವಾಗಿತ್ತು. ನಾನು ಅವರ ಭಾಷಣಗಳನ್ನು ಮತ್ತೆ ಏಳು ವರ್ಷಗಳ ಕಾಲ ಕೇಳುತ್ತಲೇ ಇದ್ದೆ. ಅಂದಿನಿಂದ ನನ್ನ ಜೀವನವೇ ಬದಲಾಗಿಹೋಯಿತು. ಒಮ್ಮೆ ಸೂರ್ಯನನ್ನು ನೋಡಿದರೆ ಮತ್ತೆ ಅದನ್ನು ನೀವು ಮರೆಯುವುದಿಲ್ಲ. ಅಂತಹ ಅನುಭವ ಅದಾಗಿತ್ತು." ಇವು ತನ್ನ ಆಪ್ತಸ್ನೇಹಿತೆ ಡೋರಾಳ ಆಮಂತ್ರಣದ ಮೇರೆಗೆ, ಅತ್ಯಂತ ಐಶ್ವರ್ಯವಂತ ಕುಟುಂಬದಲ್ಲಿ ಜನಿಸಿದ ಚೆಲುವೆ ಜೊಸೆಫಿನ್ ಮ್ಯಾಕ್‌ಲೌಡ್, ತನ್ನ ತಂಗಿಯೊಡನೆ ಈ 'ಹಿಂದೂ ಸಂನ್ಯಾಸಿ' ಯನ್ನು ಮೊದಲ ಬಾರಿಗೆ ಸಂಧಿಸಿದ ಅನುಭವವನ್ನು ಕುರಿತು ನುಡಿದ ಮಾತುಗಳು.

ಮುಂದೆ ಜೊಸೆಫಿನ್ ಸ್ವಾಮೀಜಿಯ ಪಾಶ್ಚಿಮಾತ್ಯ ಕಾರ್ಯದಲ್ಲಿ ಆಪ್ತಸಹಾಯಕಳಾದಳು, ಅವರ ಬೆಂಬಲಿಗಳಾದಳು. ಈಕೆಯಿಂದಲೇ ಪಾಶ್ಚಿಮಾತ್ಯ ಜಗತ್ತಿನ ಅನೇಕ ಶ್ರೇಷ್ಠ ಚಿಂತಕರು ಮತ್ತು ಬರಹಗಾರರಿಗೆ ರಾಮಕೃಷ್ಣ–ವಿವೇಕಾನಂದ ಭಾವಧಾರೆಯ ಪರಿಚಯವಾಯಿತು. ರಾಮಕೃಷ್ಣ ಸಂಘದ ಆಂದೋಲನವು ಬೃಹದಾಕಾರವಾಗಿ ಬೆಳೆಯಲು ಆಕೆಯು ನೀಡಿದ ಕೊಡುಗೆ ಅಪಾರ. ಶ್ರೀಮಾತೆಯವರ ಶಿಷ್ಯರಾದ ಸ್ವಾಮಿ ಅಶೇಷಾನಂದರು, "ಸ್ವಾಮೀಜಿಯ ಕಾರ್ಯಕ್ಕೆ ಶ್ರೀರಾಮಕೃಷ್ಣರು ಕಳುಹಿಸಿದ ವಿಶೇಷ ವ್ಯಕ್ತಿ" ಎಂದು ಜೊಸೆಫಿನ್ ಮ್ಯಾಕ್‌ಲೌಡ್‌ಳ ಬಗ್ಗೆ ಬರೆಯುತ್ತಾರೆ. ಒಮ್ಮೆ ಆಕೆ, "ನಿಮಗೆ ನಾನು ಹೇಗೆ ಸಹಾಯ ಮಾಡಬಲ್ಲೆ?" ಎಂದು ಸ್ವಾಮಿ ವಿವೇಕಾನಂದರನ್ನು ಕೇಳುತ್ತಾಳೆ. ಅದಕ್ಕೆ ಸ್ವಾಮೀಜಿ ಹೇಳುತ್ತಾರೆ: **"ಭಾರತವನ್ನು ಪ್ರೀತಿಸು."** ಈ ಎರಡೇ ನುಡಿಗಳು ಆಕೆಯ ಬಾಳಿನುದ್ದಕ್ಕೂ ಬೆಳಕಾದವು. ಸ್ವಾಮಿ ವಿವೇಕಾನಂದರು ಆಕೆಗೆ ಕೇವಲ ಗುರುವಾಗಿರಲಿಲ್ಲ, ಆಪ್ತ ಸ್ನೇಹಿತ ಕೂಡ ಆಗಿದ್ದರು.

ಜೊಸೆಫಿನ್ ಮ್ಯಾಕ್‌ಲೌಡ್ ಸ್ವಾಮೀಜಿಯ ಬಗ್ಗೆ ಹೀಗೆಂದು ಬರೆಯುತ್ತಾಳೆ: "ಸ್ವಾಮೀಜಿಯವರಲ್ಲಿ ನನ್ನ ಮನಸೆಳೆದದ್ದು ಅವರ ಅಸೀಮ ಶಿಖರ ತುದಿ. ಆ ಪರ್ವತದ ಬುಡ, ಬದಿ–ಯಾವುದೂ



ಜೊಸೆಫಿನ್ ಮ್ಯಾಕ್‌ಲೌಡ್

ನನಗೆಟುಕಲಿಲ್ಲ. ಅದ್ಭುತ ಸ್ವರೂಪ ಅವರದು! ನನಗನಿಸುತ್ತದೆ, ಸ್ವಾಮೀಜಿ ನಮಗೆ ಆಧಾರವಾಗಿ ಇರುವ ಒಂದು ಭೀಮಶಿಲೆ. ನನ್ನ ಜೀವನದಲ್ಲಿ ಅವರ ಪಾತ್ರ ಇದೇ. ಪೂಜೆಯೂ ಅಲ್ಲ, ವೈಭವವೂ ಅಲ್ಲ; ಹಾಯಾಗಿ ಅವರ ಪಾದದಡಿ ಕುಳಿತು ಪ್ರಯೋಗ ಮಾಡುವುದು!"

ಸ್ವಾಮೀಜಿಯವರನ್ನು ತನ್ನ ೩೭ ನೇ ವರ್ಷ ವಯಸ್ಸಿನಲ್ಲಿ ಭೇಟಿ ಮಾಡಿದ ದಿನದಿಂದ ಜೊಸೆಫಿನ್ ಮ್ಯಾಕ್‌ಲೌಡ್ ತನ್ನ ಆಯುಸ್ಸನ್ನು ಲೆಕ್ಕಹಾಕತೊಡಗಿದಳು! ಆ ದಿನವನ್ನು ತನ್ನ 'ಆಧ್ಯಾತ್ಮಿಕ ಹುಟ್ಟುಹಬ್ಬ' ವೆಂದು ಆಕೆ ಆಚರಿಸುತ್ತಿದ್ದಳು. ಸ್ವಾಮೀಜಿ ಆಕೆಗೆ 'ಜಯಾ' ಎಂದು ಹೆಸರಿಟ್ಟು ಪ್ರೀತಿಯಿಂದ 'ಜೋಜೋ' ಎಂದು ಕರೆಯುತ್ತಿದ್ದರು. ಜಯಾ, ನಿವೇದಿತಾ ಮತ್ತು ಸಾರಾ – ಇವರು ಮೂವರನ್ನು "ಟ್ರಿನಿಟಿ" (ತ್ರಿಮೂರ್ತಿಗಳು) ಎನ್ನುತ್ತಿದ್ದರು ಸ್ವಾಮೀಜಿ.

ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ನಾನು ಕಲ್ಪನೆಯಲ್ಲೂ ನಿನ್ನ ಋಣವನ್ನು ತೀರಿಸಲಾರೆ. ನಾನು ಎಲ್ಲಿದ್ದರೂ ಹೇಗಿದ್ದರೂ, ನನ್ನ ಭಾರವನ್ನು ಹೊರುವ ಶಕ್ತಿ ಸದಾ ನನ್ನ ಹಿತಚಿಂತನೆ ಮಾಡುವ ನಿನಗೊಬ್ಬಳಿಗೇ ಇರುವುದು." ನಿವೇದಿತಾಳ ಬಳಿ ತಮ್ಮ ಜೀವಿತದ ಕೊನೆಯ ಅಂಕದಲ್ಲಿ ಸ್ವಾಮೀಜಿ ಹೇಳಿದ ಮಾತುಗಳು ಜೊಸೆಫಿನ್ ಮ್ಯಾಕ್‌ಲೌಡ್‌ಳ ಶ್ರೇಷ್ಠತೆಯನ್ನು ಸಾರುತ್ತವೆ, **"ಆಕೆ ಪವಿತ್ರತೆಯಷ್ಟೇ ಪವಿತ್ರಳಾಗಿದ್ದಾಳೆ; ಪ್ರೀತಿಯೇ ಮೈವೆತ್ತಂತೆ ಇದ್ದಾಳೆ."**

*(ಮುಂದುವರಿಯುವುದು)*

# ನೀವು ಅವರ ಋಣವನ್ನು ತೀರಿಸಲಾರಿರಿ

**ಯೋ**ಗೇಶ್ ಕುಲಕರ್ಣಿ ತರಗತಿಯನ್ನು ಪ್ರವೇಶಿಸಿಯೇ ಬಿಟ್ಟರು. ಹುಡುಗರೆಲ್ಲರೂ ಉತ್ಸಾಹದಿಂದ ಎದ್ದುನಿಂತು ಅವರಿಗೆ ಸ್ವಾಗತವನ್ನು ಕೋರಿದರು. "ನಡೆಯಿರಿ, ನಡೆಯಿರಿ, ನಿಮ್ಮ ಚೀಲಗಳು ಇಲ್ಲಿಯೇ ಇರಲಿ" ಎಂದರು ಕುಲಕರ್ಣಿ, ತುಂಟ ನಗೆ ನಗುತ್ತ. ಮಕ್ಕಳೆಲ್ಲರೂ ಹೊರನಡೆದರು. ಕುಲಕರ್ಣಿ ಮಾಸ್ತರರು ಒಂದು ಮರದ ಕೆಳಗೆ ಅವರನ್ನೆಲ್ಲ ಸೇರಿಸಿದರು.

ಆ ತರಗತಿಯ ಹುಡುಗ ಅಭಿಷೇಕ್ ಟೈಫಾಯ್ಡ್ ಜ್ವರದಿಂದ ನರಳುತ್ತಿದ್ದ. ಆಸ್ಪತ್ರೆಯಿಂದ ಈಗ ತಾನೇ ಮನೆಗೆ ಬಂದಿದ್ದ. ಅವನನ್ನು ನೋಡಲು ಹುಡುಗರೆಲ್ಲ ಶಾಲೆಯ ಹತ್ತಿರವೇ ಇದ್ದ ಅವನ ಮನೆಗೆ ಹೋದರು. ಅಭಿಷೇಕನ ತಂದೆ ಆಫೀಸಿಗೆ ಹೋಗಿದ್ದರು. ತಾಯಿ ದೇವಸ್ಥಾನಕ್ಕೆ ಹೋಗಿದ್ದರು. ಮನೆಯಲ್ಲಿ ಇದ್ದವರೆಂದರೆ, ಹಾಸಿಗೆಯ ಮೇಲೆ ಮಲಗಿದ್ದ ಅಭಿಷೇಕ್ ಮತ್ತು ಅವನ ಅಜ್ಜಿ ಇಬ್ಬರೇ.

ತನ್ನ ಸುತ್ತ ನೆರೆದ ಸಹಪಾಠಿಗಳಿಗೆ ಕ್ಷೀಣಸ್ವರದಿಂದ ಅಭಿಷೇಕ್ ಹೇಳಿದ, "ನನ್ನ ತಂದೆತಾಯಿಗಳು ಚೆನ್ನಾಗಿ ಆರೈಕೆ ಮಾಡಿರದಿದ್ದರೆ, ನಾನು ಗುಣವಾಗುತ್ತಲೇ ಇರಲಿಲ್ಲ. ನನ್ನ ತಾಯಿ ದಿನಾ ರಾತ್ರಿ ನನ್ನ ಆರೈಕೆ ಮಾಡಿದರು. ಆಸ್ಪತ್ರೆಯಲ್ಲಿಯೂ, ಈಗ ಮನೆಯಲ್ಲಿಯೂ ಯಾವಾಗಲೂ ಅವರು ನನ್ನ ಮೇಲೆ ಗಮನ ಇಟ್ಟೇ ಇರುತ್ತಾರೆ. ನನ್ನ ತಂದೆ ರಾತ್ರಿಯೂ ಕೆಲಸಮಾಡುತ್ತಿದ್ದಾರೆ. ನನ್ನ ಔಷಧಿಗಾಗಿ ಹೆಚ್ಚು ಖರ್ಚಾಗುತ್ತದೆ, ಅಲ್ಲವೇ?"

ನಂತರ, ಎಲ್ಲ ಮಕ್ಕಳನ್ನೂ ಶಾಲೆಗೆ ಕರೆತಂದು, ಕುಲಕರ್ಣಿ ಮಾಸ್ತರರು ಹೇಳಿದರು, "ನೋಡಿದರಾ, ತಂದೆತಾಯಿಗಳು ಮಕ್ಕಳಾದ ನಿಮಗೆ ಎಷ್ಟು ತ್ಯಾಗ ಮಾಡುತ್ತಾರೆ! ನಿಮ್ಮನ್ನು ಸಂತೋಷವಾಗಿಡಲು ಎಷ್ಟೊಂದು ಶ್ರಮ ವಹಿಸುತ್ತಾರೆ! ನಿಮಗೆ ವಿದ್ಯಾಭ್ಯಾಸ ಮಾಡಿಸಲು, ಊಟ ಬಟ್ಟೆ ವಸತಿ ಒದಗಿಸಲು ನಿಮ್ಮ ಪೋಷಕರು ಅದೆಷ್ಟು ಕಷ್ಟಪಡುತ್ತಾರೆ! ಅವೆಲ್ಲವನ್ನೂ ತುಂಬು ಪ್ರೀತಿಯಿಂದ ಅವರು ಮಾಡುತ್ತಾರೆ. ನೀವು ಎಂದಿಗೂ ಅವರ ಪ್ರೀತಿಯ ಅಥವಾ ತ್ಯಾಗದ ಋಣವನ್ನು ತೀರಿಸಲಾಗುವುದಿಲ್ಲ. ನೀವು ಮಾಡಬಹುದಾದುದು ಏನೆಂದರೆ, ಅವರನ್ನು ಭಕ್ತಿ ಗೌರವಗಳಿಂದ ನೋಡುವುದು, ಅವರ ಸೇವೆ ಮಾಡುವುದು."

"ನಾವು ನಮ್ಮ ತಂದೆತಾಯಿಗಳಿಗೆ ಹೇಗೆ ಸಹಾಯ ಮಾಡಬೇಕು?" ಸುಧಾ ಕೇಳಿದಳು. "ಅಂಗಡಿಗೆ ಹೋಗಿ ದಿನಸಿ, ತರಕಾರಿಗಳನ್ನು ತರುವುದು; ತಾಯಿಗೆ ಅಡುಗೆಮನೆಯಲ್ಲಿ ಸಹಾಯ ಮಾಡುವುದು; ನಿಮ್ಮ ಕೊಠಡಿಯನ್ನು ಶುಭ್ರವಾಗಿ ಇಟ್ಟುಕೊಳ್ಳುವುದು; ನಿಮ್ಮ ಪುಸ್ತಕ, ಚಪ್ಪಲಿಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ನಿಮ್ಮ ಬಟ್ಟೆ ನೀವೇ ಒಗೆದುಕೊಳ್ಳುವುದು, ನಿಮ್ಮ ತಮ್ಮ ಅಥವಾ ತಂಗಿಯನ್ನು ನೋಡಿಕೊಳ್ಳುವುದು, ನಿಮ್ಮ ಅಜ್ಜಅಜ್ಜಿಯರಿಗೆ ಸೇವೆ ಮಾಡುವುದು – ಹೀಗೆ ಹಲವಾರು ರೀತಿಯಲ್ಲಿ ನೀವು ನಿಮ್ಮ ತಂದೆತಾಯಿಗಳಿಗೆ ನೆರವಾಗಬಹುದು" ಎಂದರು ಕುಲಕರ್ಣಿ.



ಶಾಲಾಕೊಠಡಿಯಲ್ಲಿ ಶ್ರೀಮಾತೆ ಶಾರದಾದೇವಿಯವರ ಚಿತ್ರವಿತ್ತು. ಅದನ್ನು ತೋರಿಸುತ್ತ ಕುಲಕರ್ಣಿ ಮುಂದುವರಿಸಿದರು, "ಶಾರದಾದೇವಿಯವರು ಚಿಕ್ಕ ವಯಸ್ಸಿನವರಿದ್ದಾಗಲೇ, ಮನೆಯಲ್ಲಿದ್ದ ಹಸುಗಳಿಗಾಗಿ ಹುಲ್ಲು ಕೊಯ್ಯುತ್ತಿದ್ದರು, ಕೊಳದಿಂದ ನೀರು ತರುತ್ತಿದ್ದರು, ಅವರ ಅಮ್ಮನಿಗೆ ಅಡುಗೆಯಲ್ಲಿ ಸಹಾಯ ಮಾಡುತ್ತಿದ್ದರು, ಅದಲ್ಲದೆ ತಮ್ಮ ಪುಟ್ಟ ತಮ್ಮಂದಿರನ್ನು ನೋಡಿಕೊಳ್ಳುತ್ತಿದ್ದರು. ಒಮ್ಮೆ ಅವರಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ ಬರಗಾಲ ಬಂತು. ಅವರ ತಂದೆ ಬಡವರಿಗೆ ಊಟ ಹಾಕುತ್ತಿದ್ದರು. ಬಿಸಿಯಾಗಿದ್ದ ಆಹಾರವನ್ನು ತಿನ್ನಲು ಜನರಿಗೆ ಕಷ್ಟವಾಗುತ್ತಿತ್ತು. ಆಗ ಪುಟ್ಟ ಶಾರದೆ ಒಂದು ಬೀಸಣಿಗೆಯಿಂದ ಬೀಸಿ ಅದನ್ನು ಆರಿಸುತ್ತಿದ್ದಳು.

"ಈಗ ಶ್ರವಣಕುಮಾರನ ಕಥೆಯನ್ನು ಕೇಳಿರಿ. ಅವನಿಗೆ ತನ್ನ ತಂದೆತಾಯಿಗಳ ಮೇಲೆ ಅಪಾರ ಭಕ್ತಿ. ಅವನ ತಂದೆತಾಯಿಗಳಿಗೆ ಅವನೊಬ್ಬನೇ ಮಗ. ಅವನ ತಂದೆತಾಯಿಗಳಿಗೆ ವಯಸ್ಸಾಗಿತ್ತು, ಕಣ್ಣು ಬೇರೆ ಕಾಣಿಸುತ್ತಿರಲಿಲ್ಲ. ಅವರಿಗೆ ತೀರ್ಥಯಾತ್ರೆಗೆ ಹೋಗಬೇಕು ಎಂಬ ಆಸೆ. ಆದರೆ ಅವರಿಗೆ ನಡೆಯಲಾಗುತ್ತಿರಲಿಲ್ಲ.